## ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/472/ಎಸಿಎಂ(2)/2018-19

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:09-07-2019.

-:: ಸುತ್ತೋಲೆ ::-

**ವಿಷಯ:** 2019-20ನೇ ಸಾಲಿನ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಕೋರ್ಸುಗಳಿಗೆ ಸೀಟು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳ ಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವ ಕುರಿತು.

**ಉಲ್ಲೇಖ:** ಈ ಕಛೇರಿ ಪ್ರವೇಶಾಧಿಸೂಚನೆ ಪತ್ರ ಸಂ. ಡಿಟಿಇ/472/ಎಸಿಎಂ(2)/2018-19, ದಿ:29-04-2019.

-0000000-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2019-20 ನೇ ಸಾಲಿನ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಆನ್‌ಲೈನ್ ಇಂಟರಾಕ್ಟೀವ್ ಕೌನ್ಸಲಿಂಗ್ ಪ್ರವೇಶಾತಿ ಪ್ರಕ್ರಿಯೆಯು ಪೂರ್ಣಗೊಂಡಿರುತ್ತದೆ. ಸದರಿ ಪ್ರವೇಶಾತಿ ಪ್ರಕ್ರಿಯೆಯಲ್ಲಿ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಕೋರ್ಸುಗಳಿಗೆ ಸೀಟು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳ ಕೋರ್ಸುವಾರು ಪಟ್ಟಿಯನ್ನು **ದಿನಾಂಕ:25-07-2019**ರ ಒಳಗೆ ಈ ಕೆಳಕಂಡಂತೆ ಡೌನ್‌ಲೋಡ್ ಮಾಡಿಕೊಳ್ಳಲು ತಿಳಿಸಲಾಗಿದೆ.

- ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳು ನೋಡಲ್ ಕೇಂದ್ರಗಳ ಮೂಲಕ ತಮ್ಮ ಸಂಸ್ಥೆಗಳ ಡಿಪ್ಲೋಮಾ ಕೋರ್ಸುಗಳಿಗೆ ಸೀಟು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳ ಪಟ್ಟಿಯನ್ನು ಈಗ್ಗಾಗಲೇ ನೀಡಿರುವ User Name and Password ನ್ನು ಬಳಸಿಕೊಂಡು ಡೌನ್‌ಲೋಡ್ ಮಾಡಿಕೊಳ್ಳುವುದು.

- ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳು ನೋಡಲ್ ಕೇಂದ್ರಗಳ ಮೂಲಕ ತಮ್ಮ ಸಂಸ್ಥೆಗಳ ಡಿಪ್ಲೋಮಾ ಕೋರ್ಸುಗಳಿಗೆ ಸೀಟು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳ ಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವ ಮೊದಲು ಈ ಕೆಳಕಂಡ ಮಾಹಿತಿಯನ್ನು ತಮ್ಮ ಸಂಸ್ಥೆಯ ಇ-ಮೇಲ್ ವಿಳಾಸದಿಂದಲೇ ಕೂಡಲೇ acm.dte@karnataka.gov.in ವಿಳಾಸಕ್ಕೆ ಕಳುಹಿಸಲು ತಿಳಿಸಲಾಗಿದೆ. ನಂತರ ತಮ್ಮ ಸಂಸ್ಥೆಯ ಇ-ಮೇಲ್ ವಿಳಾಸಕ್ಕೆ ಕಳುಹಿಸುವ User Name and Password ನ್ನು ಬಳಸಿಕೊಂಡು ಅಭ್ಯರ್ಥಿಗಳ ಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. ತಪ್ಪಿದ್ದಲ್ಲಿ, ಸಂಸ್ಥೆಯ ಪ್ರಾಂಶುಪಾಲರೇ ಹೊಣೆಗಾರರಾಗಿರುತ್ತಾರೆ.

*E_mail Subject:- ON-LINE ADMISSION STATISTICS 2019-20*

**Details to be mentioned in E-mail**

| Polytechnic Code | Name of the Polytechnic | Inst. Email_Id | Principal Name | Principal Mobile NO. |
|---|---|---|---|---|

ಸಹಾಯಕ ನಿರ್ದೇಶಕರು(ಎಂಪಿಸಿ)

ಇವರಿಗೆ,

*ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ - ಸೂಕ್ತ ಮಾಹಿತಿಗಾಗಿ ಹಾಗೂ ಅನುಸರಣೆಗಾಗಿ.*

<u>ಪ್ರತಿ:-</u>

1. ಜಂಟಿ ನಿರ್ದೇಶಕರು (ಆಡಳಿತ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
2. ಜಂಟಿ ನಿರ್ದೇಶಕರು (ಪರೀಕ್ಷೆ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
4. ನಿರ್ದೇಶಕರ ಆಪ್ತ ಶಾಖೆಗೆ.
5. ಸಂಯೋಜನಾಧಿಕಾರಿಗಳು, ಇ-ಆಡಳಿತ, ತಾಂ.ಶಿ.ನಿ, ಬೆಂಗಳೂರು - ಸದರಿ ಸುತ್ತೋಲೆಯನ್ನು ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸುವುದು.
6. ಕಛೇರಿ ಪ್ರತಿ.